(ಇಂದು ದಿನಾಂಕ 25-10-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ವಿ.ಎಸ್.ಎಸ್. ವಕೀಲರಿಂದ–</u>**

ನಾನು ಈಗಾಗಲೇ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ನಿಶಾನೆ ಪಿ. 1 ರಿಂದ 11 – ದಾವಾಸ್ತಿಗಳಿಗೆ ಸಂಬಂಧಿಸಿದ ಪಹಣಿಪತ್ರಿಕೆಗಳು



ನಿಶಾನೆ ಪಿ. 12 – ನನ್ನ ವಕೀಲರು ಪ್ರತಿವಾದಿಗೆ ಕಳುಹಿಸಿದ್ದಾರೆ ಎನ್ನಲಾದ ನೋಟಿಸು
ದಿನಾಂಕಃ 26-10-2017 ರ ಕಚೇರಿ ಪ್ರತಿ

ನಿಶಾನೆ ಪಿ. 13 – ಪ್ರತಿವಾದಿ ನನಗೆ ಕಳುಹಿಸಿದ ಮೊಕ್ತ್ಯಾರುನಾಮೆ ರದ್ಧತಿ ನೋಟಿಸು
ದಿನಾಂಕಃ28-09-2017 ರ ಅಸಲು ಪ್ರತಿ.

**(ಈ ಹಂತದಲ್ಲಿ ಖರೀದಿ ಕರಾರು ದಿನಾಂಕಃ 05-01-2017, ಪುರವಣಿ ಕರಾರು ದಿನಾಂಕಃ 07-09-2017 ಮತ್ತು ಪ್ರತಿವಾದಿ ವಾದಿಯ ಪರವಾಗಿ ಬರೆದುಕೊಟ್ಟಿದ್ದ ಮೊಕ್ತ್ಯಾರುನಾಮೆ ದಿನಾಂಕ 07-09-2017 ದಾಖಲೆಗಳನ್ನು ಸೂಕ್ತವಾದ ಛಾಪಾ ಕಾಗದದ ಮೇಲೆ ಬರೆದು ಕೊಡದೆ ಇರುವುದು ಕಂಡು ಬಂದಿದ್ದು , ಸದ್ರಿ ಮುದ್ರಾಂಕ ಶುಲ್ಕದ ಕೊರತೆಯ ಬಗ್ಗೆ ವಾದ ಮಂಡನೆಯ ಅವಶ್ಯಕತೆ ಇರುವ ಕಾರಣ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿರುತ್ತದೆ.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ